

ಸುಡು ಬೇಸಿಗೆ. ದಿನದಿಂದ ದಿನಕ್ಕೆ ಏರುತ್ತಿರುವ ತಾಪಮಾನ. ಸೂರ್ಯನ ಈ ಕೋಪದಿಂದ ಒಂದಷ್ಟು ಪಾರಾಗುವ ಯೋಚನೆಯಿದ್ದರೆ, ತಮಿಳುನಾಡಿನ ಕೊಡೈಕಾನಲ್‌ಗೆ (ಇಂಗ್ಲಿಷ್ ಉಚ್ಚಾರಣೆ – ಕೊಡೈಕೆನಾಲ್) ಭೇಟಿ ನೀಡಬಹುದು. ಇಲ್ಲಿ ವರ್ಷದುದ್ದಕ್ಕೂ ಚಳಿಯಿರುತ್ತದೆ. ಇನ್ನು ಚಳಿಗಾಲದಲ್ಲಿ ಕೇಳಬೇಕೆ? ಚಳಿಗಾಲದಲ್ಲಿ ಇಲ್ಲಿಯ ತಾಪಮಾನ –4 ಡಿಗ್ರಿಗೆ ಇಳಿಯುತ್ತದೆ.

ಕೊಡೈಕಾನಲ್‌ಗೆ ಹೋಗಲು ದಿಂಡಿಗಲ್‌ನಿಂದ ಮುಂದೆ ಸಾಗಿ ಘಾಟಿ ರಸ್ತೆಯನ್ನು ಹತ್ತಲು ಆರಂಭಿಸುತ್ತಲೇ, ಚಳಿ ಕಚಗುಳಿ ಇಡಲು ಆರಂಭಿಸುತ್ತದೆ. ಸುಮಾರು 50 ಕಿ.ಮೀ. ಇರುವ ಘಾಟಿ ಮೇಲೇರಲು ಎರಡರಿಂದ ಮೂರು ಗಂಟೆ ಬೇಕು. ಕಾಡು ಮಧ್ಯದ ದಾರಿಯಲ್ಲಿ ಕೆಂಪು ಮತ್ತು ಕಪ್ಪು ಮೂತಿಯ ವಾನರ ಸೇನೆ ಮತ್ತೆ ಮತ್ತೆ ಕಾಣ ಸಿಗುತ್ತದೆ. ಆದರೆ ಅವುಗಳಿಗೆ ಆಹಾರ ನೀಡುವುದು, ಮುಟ್ಟಲು ಪ್ರಯತ್ನಿಸುವುದು ಮಾಡಬೇಡಿ ಎಂದು ಅಲ್ಲಿನ ಸ್ಥಳೀಯ ಆಡಳಿತ ಪ್ರವಾಸಿಗರಿಗೆ ಮನವಿ ಮಾಡುತ್ತದೆ.

ಕೊಡೈಕಾನಲ್‌ನಲ್ಲಿ ಪ್ರಮುಖ ಆಕರ್ಷಣೆ ಅಲ್ಲಿನ ದೊಡ್ಡದಾದ ಕೆರೆ. ನಕ್ಷತ್ರಾಕಾರದಲ್ಲಿರುವ ಈ ಕೆರೆ ಸುಮಾರು 60 ಎಕರೆ ವಿಸ್ತೀರ್ಣದಲ್ಲಿ ಹರಡಿಕೊಂಡಿದೆ. ಇಲ್ಲಿ ಪೆಡಲ್ ಬೋಟ್ ಹಾಗೂ ಸಾಮಾನ್ಯ ಬೋಟಿಂಗ್ ಸೌಲಭ್ಯವಿದೆ. ಸಂಜೆ ಆರು ಗಂಟೆಯಾಗುತ್ತಿದ್ದಂತೆಯೇ ಕೆರೆಗೆ ಮೋಡಗಳು ದಾಳಿಯಿಟ್ಟು, ಆವರಿಸಿಕೊಂಡು ಬಿಡುತ್ತವೆ. ಆ ದೃಶ್ಯ ಮನಮೋಹಕವಾಗಿರುತ್ತದೆ. ಕೆರೆಯ ಸುತ್ತಲೂ ಪ್ರಯಾಣಿಸಲು ಸಾಮಾನ್ಯ ಸೈಕಲ್ ಹಾಗೂ ಟ್ಯಾಂಡಮ್ ಸೈಕಲ್ ಮತ್ತು ಕುದುರೆಗಳು ಬಾಡಿಗೆಗೆ ಸಿಗುತ್ತವೆ.

ಕೆರೆಯ ಮೇಲ್ಭಾಗದಿಂದ ಒಮ್ಮೆ ಪ್ರಯಾಣ ಆರಂಭಿಸಿದರೆ ಪ್ರೇಕ್ಷಣೀಯ ಸ್ಥಳಗಳ ಸಾಲೇ ತೆರೆದುಕೊಳ್ಳುತ್ತದೆ. ಕೆಲವು ಪ್ರೇಕ್ಷಣೀಯ ಸ್ಥಳಗಳು ಹೀಗಿವೆ.

ಅಪ್ಪರ್ ಲೇಕ್ ವ್ಯೂ: ಬೆಟ್ಟದ ಮೇಲಿನಿಂದ ಕೊಡೈ ಕೆರೆಯ ದರ್ಶನ.

ಶಾಂತಿ ವ್ಯಾಲಿ (ಮಾಯರ್ ಪಾಯಿಂಟ್): ಬೆಟ್ಟ ಹಾಗೂ ಕಾಡನ್ನು ಮೋಡಗಳು ಚುಂಬಿಸುವ, ಕ್ಷಣಕ್ಷಣಕ್ಕೂ ವಾತಾವರಣ ಬದಲಾಗುವ ಅದ್ಭುತ ಸ್ಥಳ.

ಪೈನ್ ಫಾರೆಸ್ಟ್: ಆಕಾಶವನ್ನು ತಲುಪಲು ಸ್ಪರ್ಧೆಗೆ ಬಿದ್ದಂತೆ ಎತ್ತರವಾಗಿ ಬೆಳೆದಿರುವ ಪೈನ್ ಮರಗಳ ಕಾಡು.

ಪಿಲ್ಲರ್ ರಾಕ್: ದೈತ್ಯಾಕಾರಾದ ಕಲ್ಲುಬಂಡೆಗಳ ಸಾಲು. ಇಲ್ಲಿ ಕೂಡ ಕೆಲವಾರು ನಿಮಿಷಗಳಲ್ಲೇ ವಾತಾವರಣ ಬದಲಾಗುತ್ತಿರುತ್ತದೆ.

ಇದಲ್ಲದೇ, ಕೋಕರ್ಸ್ ವಾಕ್, ಗುಣಾ ಕೇವ್, ಗ್ರೀನ್ ವ್ಯಾಲಿ ವ್ಯೂ ಹೀಗೆ ನೋಡಬೇಕಾದ ಸ್ಥಳಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಮುಖ್ಯವಾಗಿ, ಕೊಡೈಕಾನಲ್‌ನಲ್ಲಿ ಭೇಟಿ ನೀಡಲೇಬೇಕಾದ ಮತ್ತೊಂದು ಸ್ಥಳ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್‌ನ ಸೋಲಾರ್ ಆಬ್ಸರ್ವೇಟರಿ. ಇಲ್ಲಿನ ಮ್ಯೂಸಿಯಂನಲ್ಲಿ ಸೂರ್ಯನ ಲೈವ್ ಇಮೇಜ್ ತೋರಿಸಲಾಗುತ್ತದೆ. ಅಷ್ಟೇ ಅಲ್ಲ, ಇಲ್ಲಿನ ಸಿಬ್ಬಂದಿ ಸೂರ್ಯನ ಕುರಿತಾಗಿ ಪ್ರವಾಸಿಗರಿಗೆ ವಿವರವಾದ ವಿಶ್ಲೇಷಣೆ ನೀಡುತ್ತಾರೆ. ಸೌರಮಂಡಲ ಕುರಿತಾದ ಮಾಹಿತಿ, ಚಿಕ್ಕ ಥಿಯೇಟರ್, ಹಳೆಯ ಕಾಲದ ಟೆಲಿಸ್ಕೋಪ್‌ಗಳು ಮ್ಯೂಸಿಯಂನಲ್ಲಿವೆ. ಪ್ರಯೋಗಾಲಯ ಹಾಗೂ ದೂರದರ್ಶಕಗಳಿಗೆ ಕೇವಲ ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಷ್ಟೇ ಪ್ರವೇಶವಿದೆ.

ಕೊಡೈಕಾನಲ್‌ನ ಹೋಮ್ ಮೇಡ್ ಚಾಕಲೇಟ್, ಚೀಸ್, ಕಾಡಿನ ಉತ್ಪನ್ನಗಳೂ ಪ್ರಸಿದ್ಧ. ಅಷ್ಟೇ ಅಲ್ಲ, ಇಲ್ಲಿ ದೊರಕುವ ಲಿಚಿ, ಅವಕಾಡೊ, ಪ್ಲಮ್ ಹಣ್ಣುಗಳು ಸವಿಯಲು ಬಲು ಚೆನ್ನ. ಇಲ್ಲಿನ ಗಜರಿಗೂ ವಿಶೇಷ ರುಚಿಯಿದೆ.

ತಲುಪುವುದು ಹೇಗೆ: ಬೆಂಗಳೂರಿನಿಂದ ಸುಮಾರು 470 ಕಿ.ಮೀ. ದೂರದಲ್ಲಿರುವ ಈ ಬೆಟ್ಟಪ್ರದೇಶಕ್ಕೆ ಬೆಂಗಳೂರಿನಿಂದ ಸರ್ಕಾರಿ ಹಾಗೂ ಖಾಸಗಿ ಬಸ್ಸುಗಳಿವೆ. ಹತ್ತಿರದ ರೈಲು ನಿಲ್ದಾಣ ಕೊಡೈ ಸ್ಟೇಷನ್ ಹಾಗೂ ವಿಮಾನ ನಿಲ್ದಾಣ ಮಧುರೈ.

ಉಳಿದುಕೊಳ್ಳಲು ಕಡಿಮೆ ಬೆಲೆಯ ರೂಮುಗಳಿಂದ ಆರಂಭಿಸಿ ಐಷಾರಾಮಿ ಹೋಟೆಲ್‌ಗಳ ವರೆಗೆ ಎಲ್ಲ ಬಜೆಟ್‌ನ ಹೋಟೆಲ್ ಹಾಗೂ ಹೋಮ್ ಸ್ಟೇಗಳಿವೆ. ಊರಿನಿಂದ ಕೊಂಚ ಹೊರಗಿನ ಹೋಟೆಲ್ ಅಥವಾ ಹೋಮ್ ಸ್ಟೇಗಳನ್ನು ಬಾಡಿಗೆಗೆ ಪಡೆದರೆ ಕಿಟಕಿಯಿಂದಲೇ ಸುಂದರ ಪ್ರಕೃತಿಯ ಸೊಬಗನ್ನು ಸವಿಯಬಹುದು. ಈ ಬಿರು ಬೇಸಿಗೆಯಿಂದ ಕೆಲ ದಿನಗಳ ಮಟ್ಟಿಗೆ ಪಾರಾಗಲು ಕೊಡೈಕಾನಲ್ ಹೇಳಿ ಮಾಡಿಸಿದಂತಿದೆ.